ಕೊಳವೆಯೊಳಗೆ ಹರಿದ ಧೂಮ
ಕೊಳವೆ ರೂಪ ಪಡೆಯಿತು
ವ್ಯೋಮದೆಡೆಗೆ ಚಿಮ್ಮಲೆಂದೆ
ಸರಿದು ಸಾರಿ ಹರಿಯಿತು.

(ನಿನಗೆ ಕವಿ ಅನಿಸಿಕೊಳ್ಳುವ ತೆವಲಿದೆ. ಹಾಗಾಗಿ ನೀನು ನಿನ್ನ ಬರಹದ ನಡುನಡುವೆ ಅನವಶ್ಯಕ ಕವನಗಳನ್ನು ತುಂಬುತ್ತೀಯ ಅನ್ನುವ ಗಂಡನ ಕಟು ಟೀಕೆಯನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾ...) ಹೊಗೆ ವ್ಯೋಮದೆಡೆಗೆ ಚಿಮ್ಮುವುದೇನೋ ಸರಿ... ಆದರೂ ಒಂದೇ ಒಂದು ಕುತೂಹಲ... ಒಂದೊಮ್ಮೆ ಅದು ಈ ಭೂಮಿಯ ಗುರುತ್ವವನ್ನು ಧಿಕ್ಕರಿಸಿ ಮೇಲೆ ಹೋಗದೆ ಇಲ್ಲೇ ಇರುತ್ತಿದ್ದರೆ ಹೇಗಿರುತ್ತಿತ್ತು? ನ್ಯೂಟನನ ಸಿಗರೇಟಿನ ಹೊಗೆ ಅದರ ಬೂದಿಯೊಡನೆ ಅವನ ಪಾದವನ್ನು ಸ್ಪರ್ಶಿಸಿ ಮತ್ತೇನಾಗುತ್ತಿತ್ತು?... ನಮಗೆಲ್ಲ ಚಿತ್ರಕಲೆ ಕಲಿಸಿದ ತಿಮ್ಮನ ಪ್ರಕಾರ, ಚಿತ್ರಗಳಿಗೆ ಜೀವಂತಿಕೆ ಬರಬೇಕಾದರೆ ಖಾಲಿ ಜಾಗಗಳಲ್ಲಿ ಹೊಗೆ ಹೊಮ್ಮಿಸಲೇಬೇಕಿತ್ತು. ಮಾಡಿನ ಚಿಮಣಿಯಲ್ಲಿ ಹೊರಸೂಸುವ ಹೊಗೆ, ವಾಹನದ ಕೊಳವೆಗಳಲ್ಲಿ ಚಿಮ್ಮುವ ಹೊಗೆ, ಕೈಯಲ್ಲಿರುವ ಬೀಡಿ, ಸಿಗರೇಟು ಯಾ ಚುಟ್ಟಾದಲ್ಲಿ ಸುರುಳಿ ಸುತ್ತುವ ಹೊಗೆ... ಇದು ಎಲ್ಲಿಯವರೆಗೆ ಅಂದರೆ, ಕೋಪ ಬಂದಿದೆ ಎಂಬುದನ್ನು ತೋರಿಸಲು ಕೂದಲನ್ನು ನೇರ ಕೊಳವೆಯಂತೆ ಮಾಡಿ ತಲೆಯಲ್ಲೂ ಹೊಗೆ ಹೊಮ್ಮಿಸಬಹುದು ಎಂಬಲ್ಲಿಯವರೆಗೆ. ಹಾಗೆ ನೋಡಿದರೆ ನಮ್ಮ ಪ್ರಾಚೀನರ ಲೆಕ್ಕಾಚಾರದಂತೆ ಈ ದೇಹವೂ ಒಂಬತ್ತು ರಂಧ್ರಗಳಿರುವ ಖಾಲಿ ಕೊಳವೆಯೇ ಅಲ್ಲವೇ?

